# ರೈತ ಮಿತ್ರ



**ಡ್ರ್ಯಾಗನ್ ಹಣ್ಣಿನ ಚಾಟನಿ/ಸವರುವಿಕೆ ಬಗ್ಗೆ ಮಾಹಿತಿ ನೀಡಿ.**

| **ದಿವಾಕರ್** ಚಿಕ್ಕಬಳ್ಳಾಪುರ

ಸೂಪರ್ ಫ್ರೂಟ್ ಎಂದು ಕರೆಯಲಾಗುವ ಈ ಹಣ್ಣಿನ ಮೂಲ ದಕ್ಷಿಣ ಅಮೆರಿಕಗೆ ಸೇರಿದ್ದು. ಬಣ್ಣಕ್ಕೆ ಅನುಗುಣವಾಗಿ ಕೆಂಪು ಹಣ್ಣು - ಬಿಳಿ ತಿರುಳು, ಕೆಂಪು ಹಣ್ಣು - ಕೆಂಪು ತಿರುಳು, ಹಳದಿ ಹಣ್ಣು - ಬಿಳಿ ತಿರುಳು ಎಂಬ 3 ವಿಧಗಳಲ್ಲಿ ವರ್ಗೀಕರಿಸಬಹುದು. ಉತ್ತಮ ಬೆಳವಣಿಗೆಗಾಗಿ ಸಸ್ಯಗಳಿಗೆ ಉತ್ತಮ ಆಕಾರ ಮತ್ತು ಗಾತ್ರ ನಿರ್ವಹಿಸುವ ಅಗತ್ಯವಿದೆ. ಚಾಟನಿ ಮಾಡುವುದರಿಂದ ಹಣ್ಣುಗಳನ್ನು ಸಲೀಸಾಗಿ ಕೊಯ್ಲು ಮಾಡಲು ಸಹಕಾರಿಯಾಗುತ್ತದೆ. ಕೀಟ ಮತ್ತು ರೋಗಬಾಧೆ ಹೆಚ್ಚುವ ಸಾಧ್ಯತೆ ಇರುವುದರಿಂದ ಕತ್ತರಿಸಿದ ಭಾಗಗಳನ್ನು ಆರಿಸಿ, ತೋಟದ ಹೊರಗಡೆ ವಿಲೇವಾರಿ ಮಾಡಿ ಸುಡುವುದು ಸೂಕ್ತ.

**ಚಾಟನಿ:** ಮೇ - ಜೂನ್‌ನಲ್ಲಿ ಹಣ್ಣು ಕೊಯ್ಲು ಮಾಡಿದ ತಕ್ಷಣ ಮುಖ್ಯ ಕಾಂಡವನ್ನು ಸವರಿ, ಒತ್ತೊತ್ತಾಗಿ ಬೆಳೆಯುವ ಕಾಂಡಗಳನ್ನು ಕತ್ತರಿಸಬೇಕು. ಹಳೆಯ ಕಾಂಡಗಳನ್ನು ತೆಗೆದು, ಗಿಡಕ್ಕೆ ಹೊಸ ರೂಪ ನೀಡಬೇಕು. ಹೊಸ ಕಾಂಡಗಳನ್ನು ಬೆಳೆಸುವಂತೆ ಮಾಡಬೇಕು. ಗಿಡದ ಎತ್ತರ/ಗಾತ್ರ ಇಳಿಸಿ, 50 ಮುಖ್ಯಕಾಂಡಗಳನ್ನು ಮತ್ತು ತಲಾ ಒಂದು ಮುಖ್ಯಕಾಂಡಕ್ಕೆ ಎರಡು ಉಪ ಕಾಂಡಗಳನ್ನು ಬೆಳೆಸುವುದು. ಈ ವಿಧಾನದಿಂದ ಹೆಚ್ಚಿನ ಇಳುವರಿ ಪಡೆಯಬಹುದು.

| **ಡಾ. ಪ್ರಹ್ಲಾದ್ ಪಿ. ಭಟ್** ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಸ್ತರಣೆ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್ಆ್ಯಪ್ ಮಾಡಿ

Vijayavani pg 08

# ಚಳಿಗಾಲಕ್ಕೆ ಸೂಕ್ತ ಎಲೆಕೋಸು

ಲವಲVK GARDEN ಲೋಕ



ಎಲೆಕೋಸು ಒಂದು ಪೌಷ್ಟಿಕ ತರಕಾರಿಯಾಗಿದ್ದು ಕಡಿಮೆ ಉಷ್ಣಾಂಶ ಬಯಸುವ ಬೆಳೆ. ಸಾಮಾನ್ಯವಾಗಿ ಇದನ್ನು ಚಳಿಗಾಲದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಎಲೆಕೋಸು ಎಂದಾಕ್ಷಣ ನೆನಪಾಗುವುದು ಅದಕ್ಕೆ ಸಿಂಪಡಿಸುವ ರಾಸಾಯನಿಕ ಔಷಧಗಳು. ಇದರಿಂದ ಹಲವಾರು ಜನ ಈ ತರಕಾರಿಯನ್ನು ಬಳಸುವುದೇ ಕಡಿಮೆ ಮಾಡಿದ್ದಾರೆ. ಆದರೆ ಇದರಲ್ಲಿ ಶರ್ಕರಪಿಷ್ಟ, ಪ್ರೊಟೀನ್, ನಾರಿನಾಂಶ ಹಾಗೂ ಜೀವಸತ್ವಗಳು ಹೇರಳವಾಗಿರುವುದರಿಂದ ಕೈತೋಟ ಅಥವಾ ತಾರಸಿಯಲ್ಲಿ ರಾಸಾಯನಕಮುಕ್ತವಾಗಿ ಇದನ್ನು ಸುಲಭವಾಗಿ ಬೆಳೆದು ಇದರ ಪೌಷ್ಟಿಕ ಗುಣಗಳ ಉಪಯೋಗ ಪಡೆಯುವುದು ಅತ್ಯವಶ್ಯಕ. ಈ ಬೆಳೆ ಬೆಳೆಯಲು ಜೂನ್-ಜುಲೈ ಹಾಗೂ ಅಕ್ಟೋಬರ್-ನವೆಂಬರ್ ಸೂಕ್ತ. ಇದನ್ನು ಚೆನ್ನಾಗಿ ನೀರು ಬಸಿದು ಹೋಗುವ ಕಪ್ಪು ಮಣ್ಣಿನಿಂದ ಹಿಡಿದು ಕೆಂಪುಗೋಡು ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯಬಹುದು. ಮಣ್ಣಿನ ರಸಸಾರ 5.5-7.0 ರವರೆಗೆ ಇದ್ದರೆ ಸೂಕ್ತ. ಇದರಲ್ಲಿ ಅವಧಿಗನುಗುಣವಾಗಿ ಹಲವಾರು ತಳಿಗಳುಂಟು. ಕಡಿಮೆ ಅವಧಿ ತಳಿಗಳಿಗಿಂತ ತಡವಾಗಿ ಕೊಯ್ಲಿಗೆ ಬರುವ ತಳಿಗಳು ಹೆಚ್ಚು ಇಳುವರಿ ಕೊಡುತ್ತವೆ. ಗೊಬ್ಬರ ಮಿಶ್ರಿತ ಮಣ್ಣು ತುಂಬಿದ ಮಧ್ಯಮ ಗಾತ್ರದ ಕುಂಡದಲ್ಲಿ ಒಂದು ಸಸಿಯನ್ನು ನಾಟಿ ಮಾಡತಕ್ಕದ್ದು. ಕೈತೋಟದಲ್ಲಾದರೆ 2X1 ಅಡಿ ಅಂತರದಲ್ಲಿ ಸಸಿಗಳನ್ನು ನಾಟಿ ಮಾಡಬೇಕು. ನಾಟಿಯಾದ ನಂತರ ತೆಳುವಾಗಿ ನೀರು ಕೊಡತಕ್ಕದ್ದು. ಪ್ರತಿ 15 ದಿನಗಳಿಗೊಮ್ಮೆ ಸಾವಯವ ಗೊಬ್ಬರಗಳನ್ನು ಹಾಗೂ ಆಗಾಗ ನೀರು ಒದಗಿಸತಕ್ಕದ್ದು. ಈ ಬೆಳೆಯಲ್ಲಿ ಹೆಚ್ಚಾಗಿ ಕೀಟಗಳು ಕಂಡು ಬರುವುದರಿಂದ ಹಳದಿ ಅಂಟು ಪಟ್ಟಿಗಳು, ಬೇವಿನ ಎಣ್ಣೆ, ಬೇವಿನ ಕಷಾಯ ಹಾಗೂ ಇತರೇ ಸಾವಯವ ಪದ್ಧತಿಗಳನ್ನು ಬಳಸಿ ಸಸ್ಯ ಸಂರಕ್ಷಣೆಯನ್ನು ಮಾಡಬೇಕು. ನಾಟಿ ಮಾಡಿದ 90-120 ದಿನಗಳಲ್ಲಿ ಕೋಸನ್ನು ಕೊಯ್ಲು ಮಾಡಬಹುದು.

**ಡಾ. ಎಂ. ಶಾಲಿನಿ, ಸಹ ಪ್ರಾಧ್ಯಾಪಕರು (ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು**

V-karnataka pg 09

V-karnataka pg 05

# ಬಿಹಾರ ಗಾಳಿ ತಮಿಳುನಾಡಿಗೆ ಬೀಸಿದೆ

## ದಕ್ಷಿಣ ರಾಜ್ಯದಲ್ಲೂ ಎನ್‌ಡಿಎ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ ಮೋದಿ

**ಕೊಯಮತ್ತೂರು:** ''ರೈತರು ಶಾಲುಗಳನ್ನು ಬೀಸುತ್ತಿರುವ ದೃಶ್ಯವನ್ನು ನೋಡಿದರೆ ನಾನು ಆಗಮಿಸುವ ಮುನ್ನವೇ ಬಿಹಾರದ ಗಾಳಿಯು ತಮಿಳುನಾಡಿನತ್ತ ಬೀಸಿದೆ ಎಂದು ಭಾಸವಾಗುತ್ತಿದೆ,'' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕೊಯಮತ್ತೂರಿನಲ್ಲಿ ದಕ್ಷಿಣ ಭಾರತ ನೈಸರ್ಗಿಕ ಕೃಷಿ ಸಮ್ಮೇಳನ-2025 ಉದ್ಘಾಟನಾ ಕಾರ್ಯಕ್ರಮದಲ್ಲಿ ಮೋದಿ ಅವರು, ಬಿಹಾರ ಚುನಾವಣೆ ಗೆಲುವನ್ನು ಉಲ್ಲೇಖಿಸಿ ತಮಿಳುನಾಡಿನಲ್ಲಿ ಮುಂದಿನ ವರ್ಷ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ದೊಡ್ಡ ಸಾಧನೆ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಐಎಡಿಎಂಕೆ ಜತೆಗೂಡಿ ಬಿಜೆಪಿಯು ಆಡಳಿತಾರೂಢ ಡಿಎಂಕೆಯನ್ನು ಸೋಲಿಸಲು ತಯಾರಿ ನಡೆಸುತ್ತಿದ್ದು, ಮೋದಿ ಅವರ ಆಗಮನವು ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ತಂದಿದೆ.

**ಸಾವಯವ ಕೃಷಿ ಕೇಂದ್ರ:** ಕಾರ್ಯಕ್ರಮದಲ್ಲಿ ಪಿಎಂ-ಕಿಸಾನ್ ಯೋಜನೆ 21ನೇ ಕಂತಿನಲ್ಲಿ 18,000 ರೂ. ಬಿಡುಗಡೆ ಮಾಡಿದ ಮೋದಿ ಅವರು, '' ಸಾಂಪ್ರದಾಯಿಕ ದೇಸಿ ಶೈಲಿಯ ಕೃಷಿ ಪದ್ಧತಿಗಳ ಮೂಲಕ ಭಾರತವು ಸಾವಯವ ಕೃಷಿಯ ಜಾಗತಿಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ,'' ಎಂದರು. ರಾಗಿ ಸೇರಿದಂತೆ ಸಿರಿಧಾನ್ಯಗಳನ್ನು 'ಸೂಪರ್ ಫುಡ್' ಎಂದು ಬಣ್ಣಿಸಿದರು.

''ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಆದರೆ ಬೆಳೆ ವೈವಿಧ್ಯತೆ ಅಳವಡಿಕೆ ಮತ್ತು ಸಾವಯವ ಕೃಷಿಯು ಇದಕ್ಕೆ ಪರಿಹಾರವಾಗಿದೆ. ಅಲ್ಲದೇ ಇದು ಹವಾಮಾನ ಬದಲಾವಣೆ ಸವಾಲು ನಿಭಾಯಿಸಲೂ ಸಹಕಾರಿಯಾಗಿದೆ,'' ಎಂದು ಪ್ರಧಾನಿ ಹೇಳಿದರು.

''ಕಳೆದ 11 ವರ್ಷಗಳಲ್ಲಿ ದೇಶದ ಕೃಷಿ ವಲಯವು ಪ್ರಮುಖ ಪರಿವರ್ತನೆಗೆ ಸಾಕ್ಷಿಯಾಗಿದೆ. ಈ ಅವಧಿಯಲ್ಲಿ ಭಾರತದ ಕೃಷಿ ರಫ್ತು ಬಹುತೇಕ ದ್ವಿಗುಣಗೊಂಡಿದೆ. ರೈತರ ಕಠಿಣ ಪರಿಶ್ರಮ ಮತ್ತು ಸರಕಾರದ ವಿವಿಧ ಪ್ರೋತ್ಸಾಹದಾಯಕ ಉಪಕ್ರಮಗಳಿಂದ ಕೃಷಿ ಪ್ರಗತಿಯು ಹೊಸ ಎತ್ತರವನ್ನು ತಲುಪಿದೆ,''ಎಂದರು.

**ಕೊಯಮತ್ತೂರಿನ ಕೃಷಿ ಕಾರ್ಯಕ್ರಮದಲ್ಲಿ ಪಿಎಂ ಭಾಗಿ**




**ತಮಿಳುನಾಡಿನ ಕೊಯಮತ್ತೂರಿನಲ್ಲಿ ಬುಧವಾರ ದಕ್ಷಿಣ ಭಾರತ ಸಾವಯವ ಕೃಷಿ ಶೃಂಗ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕೃಷಿಕರಿಂದ ಮಾಹಿತಿ ಪಡೆದರು.**

### 'ತಮಿಳು ಕಲಿಯದಿದ್ದಕ್ಕೆ ಬೇಸರವಿದೆ'

ಕೃಷಿ ಕಾರ್ಯಕ್ರಮಕ್ಕೂ ಮುನ್ನ ಕೊಯಮತ್ತೂರಿನಲ್ಲಿ ಪ್ರಧಾನಿ ಮೋದಿ ಅವರು ಭರ್ಜರಿ ರೋಡ್ ಶೋ ನಡೆಸಿದರು. ಭಾಷಣದಲ್ಲಿ ಮೋದಿ ಅವರು, ''ನಾನು ಬಾಲ್ಯದಲ್ಲಿಯೇ ತಮಿಳು ಕಲಿಯಬೇಕಿತ್ತು. ಈ ಭಾಷೆಯನ್ನು ಕಲಿಯದಿದ್ದಕ್ಕೆ ಬೇಸರವಿದೆ,'' ಎಂದರು. ''ರೈತ ನಾಯಕ ಪಿ.ಆರ್. ಪಾಂಡಿಯನ್ ಅವರ ಭಾಷಣವು ತಮಿಳಿನಲ್ಲಿ ಇದ್ದ ಕಾರಣಕ್ಕೆ ಅದು ಅದ್ಭುತವಾಗಿ ಮೂಡಿಬಂತು. ನನಗೆ ಅದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಆಗಲಿಲ್ಲ, ಬಾಲ್ಯದಲ್ಲಿಯೇ ತಮಿಳು ಕಲಿಯಬೇಕಿತ್ತು ಅನಿಸಿತು ,'' ಎಂದು ಮೋದಿ ಹೇಳುತ್ತಿದ್ದಂತೆಯೇ ರೈತರು ಚಪ್ಪಾಳೆ ತಟ್ಟಿ ಸಂತೋಷ ಹೊರಹಾಕಿದರು.

# ಉತ್ತಮ ಬೆಳವಣಿಗೆ

'ಸಾಂಪ್ರದಾಯಿಕ ಮತ್ತು ದೇಶೀಯ ಶೈಲಿಯ ಕೃಷಿಯ ಮೂಲಕ ಭಾರತವು ಸಾವಯವ ಕೃಷಿಯ ಜಾಗತಿಕ ಕೇಂದ್ರ ಆಗುವ ಹಾದಿಯಲ್ಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ತಮಿಳುನಾಡಿನ ಕೊಯಮತ್ತೂರಿನಲ್ಲಿ ದಕ್ಷಿಣ ಭಾರತದ ನೈಸರ್ಗಿಕ ಕೃಷಿ ಸಮ್ಮೇಳನ ಉದ್ಘಾಟಿಸಿ ಹೇಳಿದ್ದಾರೆ. ಇದೇ ವೇಳೆ 18 ಸಾವಿರ ಕೋಟಿ ರೂ. ಮೊತ್ತದ ಪಿಎಂ-ಕಿಸಾನ್ ಯೋಜನೆಯ 21ನೇ ಕಂತನ್ನು ಪ್ರಧಾನಿ ಬಿಡುಗಡೆಗೊಳಿಸಿದರು.

ಸಾವಯವ ಕೃಷಿಗೆ ಉತ್ತೇಜನ ಒಳ್ಳೆಯ ಬೆಳವಣಿಗೆಯಾಗಿದ್ದು, ಕೃಷಿಭೂಮಿಯನ್ನು ರಾಸಾಯನಿಕಮುಕ್ತಗೊಳಿಸಲು, ಆ ಮೂಲಕ ಜನರ ಸ್ವಾಸ್ಥ್ಯ ರಕ್ಷಣೆಗೆ ಪೂರಕವಾಗಲಿದೆ. ಕಳೆದ ಹಲವು ವರ್ಷಗಳಿಂದ ಭಾರಿ ಪ್ರಮಾಣದ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಕೃಷಿ ಭೂಮಿಗಳು ಮತ್ತು ಬೆಳೆಗಳು ತೀವ್ರವಾಗಿ ಹಾನಿಗೊಳಗಾಗಿವೆ. ಪ್ರಾಚೀನ ಭಾರತದಲ್ಲಿ ಕೃಷಿಯು ಸಾಂಪ್ರದಾಯಿಕ ಕೃಷಿ ವಿಧಾನಗಳೊಂದಿಗೆ ಉತ್ಪಾದನೆಯಲ್ಲೂ ಮುಂದುವರಿದಿತ್ತು ಎಂಬ ಸಂಗತಿಯನ್ನು ಮರೆಯುವಂತಿಲ್ಲ. ಸಾವಯವ ಕೃಷಿ ಪದ್ಧತಿ ಈ ಹಿಂದೆ ತುಂಬ ಪ್ರಚಲಿತದಲ್ಲಿತ್ತು. ಅದೀಗ ಮತ್ತೆ ಮುನ್ನೆಲೆಗೆ ಬರುತ್ತಿರುವುದು ಮತ್ತು ಅದಕ್ಕಾಗಿ ಕೇಂದ್ರ ಹಾಗೂ ರಾಜ್ಯಗಳ ಸರ್ಕಾರಗಳಿಂದ ಪ್ರೋತ್ಸಾಹ ದೊರೆಯುತ್ತಿರುವುದು ಉತ್ತಮ ಬೆಳವಣಿಗೆ.



**ಪರಿಸರಕ್ಕೆ ಪೂರಕ ನೈಸರ್ಗಿಕ ಕೃಷಿ**

ದೇಶದಲ್ಲಿ ಮಧ್ಯಪ್ರದೇಶವು ರಾಷ್ಟ್ರೀಯ ಸಾವಯವ ಉತ್ಪಾದನೆ ಕಾರ್ಯಕ್ರಮ (ಎನ್‌ಪಿಒಪಿ) ಅಡಿ ಒಂದು ಮಿಲಿಯನ್ ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸಿದೆ. ಮಧ್ಯಪ್ರದೇಶದ ನಂತರ ಮಹಾರಾಷ್ಟ್ರ, ಗುಜರಾತ್ ಹಾಗೂ ರಾಜಸ್ಥಾನ ಈ ವಿಷಯದಲ್ಲಿ ಉತ್ತಮ ಸಾಧನೆ ತೋರಿವೆ. ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ರಾಜ್ಯಗಳಲ್ಲೂ ಸಾವಯವ ಕೃಷಿಗೆ ಪ್ರೋತ್ಸಾಹ ನೀಡಲಾಗಿದೆ. ಕರ್ನಾಟಕ ಕೂಡ ಸಾವಯವ ಕೃಷಿಯ ಅಳವಡಿಕೆಯಲ್ಲಿ ಮುಂದಡಿ ಇಟ್ಟಿದೆ ಎಂಬುದು ಸಮಾಧಾನದ ಸಂಗತಿ. ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕನ್ನು ರಾಜ್ಯದ ಪ್ರಥಮ ಸಾವಯವ ತಾಲೂಕನ್ನಾಗಿ ಪರಿವರ್ತಿಸುವ ಬಗ್ಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ. ರೈತರ ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸಾವಯವ ಪ್ರಮಾಣೀಕರಣ ವ್ಯವಸ್ಥೆ ಕಲ್ಪಿಸಲು ಮುಂದಾಗಿದೆ.

ಇತ್ತೀಚಿನ ದಶಕಗಳಲ್ಲಿ ಕೃಷಿ ಹಲವು ಸ್ಥಿತ್ಯಂತರ ಕಂಡಿದೆ. ರಾಸಾಯನಿಕಗಳ ಅತಿಯಾದ ಬಳಕೆ ಹಲವು ಬಗೆಯ ಅಪಾಯಗಳನ್ನು ತಂದೊಡ್ಡಿದೆ. ಪಂಜಾಬ್‌ನಲ್ಲಿ ಕೀಟನಾಶಕ ಮತ್ತು ರಸಗೊಬ್ಬರಗಳ ಅತಿಯಾದ ಬಳಕೆಯಿಂದ ಕ್ಯಾನ್ಸರ್ ರೋಗಿಗಳ ಪ್ರಮಾಣ ಹೆಚ್ಚಿದೆ. ಇತರ ಕಾಯಿಲೆಗಳು ಆವರಿಸಿಕೊಳ್ಳುತ್ತಿವೆ. ಮನುಷ್ಯನಿಗೆ ಆಹಾರವೇ ಔಷಧ. ಆದರೆ, ರಾಸಾಯನಿಕ, ಕ್ರಿಮಿನಾಶಕಗಳ ಬಳಕೆಯಿಂದ ಕೃಷಿ ಭೂಮಿ ಮತ್ತು ಆಹಾರವನ್ನೇ ವಿಷಯುಕ್ತಗೊಳಿಸಲಾಗುತ್ತಿದ್ದು, ಮಣ್ಣಿನ ಸವಕಳಿಯೂ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದಕ್ಕೆಲ್ಲ ಪರಿಹಾರ ಸಾವಯವ ಮತ್ತು ನೈಸರ್ಗಿಕ ಕೃಷಿ ವಿಧಾನ. ಆರಂಭದಲ್ಲಿ ಈ ಕೃಷಿ ಪದ್ಧತಿಯ ಬಗ್ಗೆ ರೈತರಲ್ಲಿ ತಪ್ಪು ತಿಳಿವಳಿಕೆಗಳಿದ್ದರೂ, ಈಗ ಅರಿವು ಮತ್ತು ಜಾಗೃತಿ ಹೆಚ್ಚಿದೆ. ಕೋವಿಡ್ ಕಾಲಘಟ್ಟದ ನಂತರ ಕೃಷಿ ಕ್ಷೇತ್ರಕ್ಕೆ ಯುವಕರು ಸಾಕಷ್ಟು ಸಂಖ್ಯೆಯಲ್ಲಿ ಪ್ರವೇಶಿಸಿದ್ದಾರೆ. ಇವರೆಲ್ಲ ಸಾವಯವ ಕೃಷಿ ವಿಧಾನವನ್ನು ಅನುಸರಿಸುವ ಜತೆಗೆ, ಸಾವಯವ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವಂಥ ನವೋದ್ಯಮಗಳನ್ನೂ ಆರಂಭಿಸಬಹುದು. ರೈತರ ನೆಮ್ಮದಿಯುಕ್ತ ಬದುಕಿಗೆ ಸಾವಯವ ಹಾದಿ ಅನಿವಾರ್ಯವಾಗಿತ್ತು. ಭಾರತ ಈಗ ಈ ನಿಟ್ಟಿನಲ್ಲಿ ಜಾಗತಿಕ ಕೇಂದ್ರ ಆಗುವ ಹಾದಿಯಲ್ಲಿರುವುದು ಆಶಾದಾಯಕ.

Vijayavani pg 07

Hindu pg 02

# Cubbon Park to host 11-day flower show from Nov. 27

**The Hindu Bureau**
BENGALURU

The Department of Horticulture will organise a flower show at Cubbon Park from November 27 to December 7.

The show, which is being attempted at this scale in the popular lung space, will be modelled on the annual Lalbagh Flower Show. The State Horticulture Department has allocated nearly ₹40 lakh for the 11-day show.

The show theme blends Children's Day and Karnataka Rajyotsava, shaping the designs of the floral installations as well as the cultural programmes. The exhibition will run from the Fountain circle near the Bandstand up to the Bal Bhavan Gate, one of Cubbon Park's busiest corridors. The event will be open from 6 a.m. to 7 p.m., with officials expecting the footfall to cross two lakh visitors. "Entry has been fixed at ₹30 for adults and ₹10 for children, while schoolchildren coming in uniform with valid ID cards will be getting free entry, which is meant to draw more children to the park and encourage early interest in horticulture. Parking arrangements have been strengthened to manage the expected footfall. Parking around the Central Library will be open on all days except Sundays. On weekends, visitors will be able to park at the KGD building and near the High Court," G. Kusuma, Deputy Director, Cubbon Park, Horticulture Department, told *The Hindu*.

"This is the first edition being held for more than a week, and the response this year will determine whether the Cubbon Park Flower Show becomes an annual feature like the Lalbagh Flower Show. After this year's trials, we will understand what additions can be done to attract visitors," Ms. Kusuma added.

The displays will feature 50 varieties of plants and 50 varieties of flowering species. More than 100 stalls will be set up, including nurseries, gardening accessory shops, craft stalls, and food counters.

Alongside the floral displays, the event will host a series of cultural programmes, including classical music concerts and folk performances.



The show theme blends Children's Day and Karnataka Rajyotsava, shaping the designs of the floral installations as well as the cultural programmes. FILE PHOTO

ಶೇ. 40ರಷ್ಟು ಇಳುವರಿ ಕುಸಿತ | ಚಿಲ್ಲರೆ ದರ ಕೆ.ಜಿ.ಗೆ 130 ರು.ನಿಂದ 160 ರು.ಗೆ ಏರಿಕೆ

# ಮಳೆ ಹೆಚ್ಚಳ: ತೊಗರಿಬೇಳೆ ಬೆಲೆ ಮತ್ತೆ ಏರಿಕೆ

**ಹೂವಪ್ಪ ಐ ಹೆಚ್.**

**ಬೆಂಗಳೂರು:** ಮೊದಲೇ ತರಕಾರಿ, ಹೂವು, ಹಣ್ಣು ಬೆಲೆಯಿಂದ ತತ್ತರಿಸಿರುವ ಗ್ರಾಹಕರಿಗೆ ತೊಗರಿಬೇಳೆ ಬೆಲೆ ಏರಿಕೆಯಿಂದ ಮತ್ತೊಂದು ಶಾಕ್ ಉಂಟಾಗಿದೆ. ಹಾಗಾಗಿ ಊಟಕ್ಕೆ ರುಚಿಯಾದ ಸಾಂಬಾರು ಮಾಡಲು ಹಿಂದೆ ಮುಂದೆ ನೋಡುವಂತಾಗಿದೆ.

ಮಳೆ ಕಾರಣದಿಂದ ತೊಗರಿಬೇಳೆಯ ಬೆಳೆ ಕುಂಠಿತವಾಗಿದೆ, ಆ ಕಾರಣದಿಂದಲೇ ಬೆಲೆ ಏರಿಕೆಯಾಗಿದೆ. ರಾಜ್ಯದಲ್ಲಿ ಅತಿ ಹೆಚ್ಚು ತೊಗರಿ ಬೆಳೆಯುವ ಪ್ರದೇಶ ಕಲಬುರಗಿ ಜಿಲ್ಲೆ, ಅಲ್ಲಿ ಅಂದಾಜು 5 ಲಕ್ಷ ಹೆಕ್ಟೇರ್ ತೊಗರಿಯನ್ನು ಬೆಳೆಯಲಾಗುತ್ತಿದೆ. ಈ ವರ್ಷ ಅತಿವೃಷ್ಟಿಯಿಂದಾಗಿ ತೊಗರಿ ಹಾನಿಯಾಗಿದೆ, ಆಗಸ್ಟ್ ತಿಂಗಳಲ್ಲಿ ಸುರಿದ ಅಧಿಕ ಮಳೆಯಿಂದಾಗಿ ಕಲಬುರಗಿ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದ ಬೆಳೆ ನಷ್ಟ ಉಂಟಾಗಿದೆ. ಈ ಹಾನಿಯಿಂದಾಗಿ ಬೆಳೆ ಇಳುವರಿ ಗಣನೀಯವಾಗಿ ಕಡಿಮೆಯಾಗುವ ಸಾಧ್ಯತೆಯಿದೆ ಮತ್ತು ಕೆಲವು ಜಿಲ್ಲೆಗಳಲ್ಲಿ ಸುಮಾರು ಶೇ. 40ರಷ್ಟು ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

**ರಾಜ್ಯಾದ್ಯಂತ ಹಾನಿ:** ಸುಮಾರು 3.07 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ರಾಜ್ಯಾದ್ಯಂತ ತೊಗರಿ, ಉದ್ದು, ಹೆಸರು ಸೇರಿದಂತೆ ಹಲವು ಬೆಳೆಗಳು ಹಾಳಾಗಿವೆ ಎಂದು ಹೇಳಲಾಗುತ್ತಿದೆ. ಕಲಬುರಗಿ, ಆಳಂದ, ಅಫ್ಜಲ್‌ಪುರ, ಸೇಡಂ ಭಾಗವು ಮಳೆಯಾಶ್ರಿತ ಬೆಳೆಗಳನ್ನು ಬೆಳೆಯುವ ಪ್ರದೇಶಗಳಾಗಿದ್ದು, ಅನಾವೃಷ್ಟಿ ಮಳೆಯಿಂದಾಗಿ ಬೆಳೆ ಕೈಕೊಟ್ಟಿದೆ. ಈ ಸಲ ಕೆರೆ ತುಂಬಿ ಬೆಳೆಗಳು ಚೆನ್ನಾಗಿ ಬರುತ್ತವೆ ಎಂದು ನಿರೀಕ್ಷೆ ಇಟ್ಟಿದ್ದೆವು. ಮಳೆಗೆ ಎಲ್ಲಾ ಬೆಳೆಗಳು ಹೂವು, ಕಾಯಿ ಆಗುವ ಮುನ್ನವೇ ನೀರಲ್ಲೇ ನಿಂತು, ನೀರುಪಾಲಾಗಿ ಕೈಗೆ ಬರುವ ಬೆಳೆಗಳು ಬಾರದೇ ಕೊಳೆತು ತುಂಬಾ ಹಾನಿ ಆಗಿದೆ ಎಂದು ರೈತ ಮುದುಕು ಬಿರಾದಾರ ಹೇಳಿದ್ದಾರೆ. ತೊಗರಿ ಬೆಳೆಗಾರರಿಗೆ ಒಂದಿಲ್ಲದೊಂದು ಸಂಕಷ್ಟ ಕಾಡುತ್ತಿದೆ. ಕಳೆದ ವರ್ಷದಲ್ಲಿ ನೆಟೆರೋಗದಿಂದ ಬೆಳೆ ಹಾನಿಯಾಗಿತ್ತು. ಇದೀಗ ಮಳೆಯಾಗಿದ್ದರೂ ತೊಗರಿಯೂ ಸೇರಿ ಹಲವು ಬೆಳೆ ನಾಶವಾಗಿದೆ. 'ತೊಗರಿ ಬೆಳೆ ಬರಲು ಇನ್ನೊಂದು ತಿಂಗಳಾದರೂ ಬೇಕು. ಈ ವರ್ಷದ ಹಂಗಾಮಿನ ತೊಗರಿಯ ಬೆಳೆ ಡಿಸೆಂಬರ್ ಕೊನೆ, ಜನವರಿ ತಿಂಗಳ ವೇಳೆ ಆರಂಭಗೊಳ್ಳಲಿದೆ. ಸದ್ಯ ರೈತರ ಬಳಿಯೂ ತೊಗರಿ ಬೆಳೆ ದಾಸ್ತಾನು ಇಲ್ಲ, ಇದರ ಪರಿಣಾಮವಾಗಿ ಬೇಳೆಯ ದರ ಹೆಚ್ಚಾಗಿದೆ. ಕೆಲವೇ ಕೆಲ ರೈತರ ಬಳಿ ಸ್ಟಾಕ್ ಇದ್ದು, ದಾಲ್ ಮಿಲ್‌ಗಳು ರೈತರ ಬಳಿ ಎಡತಾಕುತ್ತಿದ್ದಾರೆ. ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ, ಇಲ್ಲದೇ ಹೋದರೆ ಕೆ.ಜಿ.ಗೆ ಇನ್ನೂ 5-6 ರು. ಏರಿಕೆ ಆಗುತಿತ್ತು. ಮುಂದಿನ ತಿಂಗಳು ಹೊಸ ಬೆಳೆ ಬರುತ್ತಿದ್ದು, ಇನ್ನೂ ಹೆಚ್ಚಾಗುವ ಸಾಧ್ಯತೆ ಕಡಿಮೆ ಎನ್ನುತ್ತಾರೆ ಬೆಂಗಳೂರು ಎಪಿಎಂಸಿ ಸಗಟು ತೊಗರಿ ವ್ಯಾಪಾರಿ ವೀರಣ್ಣ. ಎರಡು ತಿಂಗಳ ಹಿಂದೆ ಕೆ.ಜಿಗೆ ಸರಾಸರಿ ಸಗಟು ದರ 90ರಿಂದ 110 ಇತ್ತು, ಈಗ 110-115 ರು. ತಲುಪಿದೆ, ಅಲ್ಲದೇ ಉತ್ತಮ ಬೆಳೆ 110 ರು. ಇದ್ದ ಬೆಳೆ 120 ಆಗಿದೆ ಚಿಲ್ಲರೆ. ದರ ಗುಣಮಟ್ಟದ ಆಧಾರದ ಮೇಲೆ 130-160ರ ತನಕವೂ ಇದೆ. ಈಗ ಸದ್ಯ ತೊಗರಿಕಾಳಿನ ದಾಸ್ತಾನು ಕಡಿಮೆ ಕಾರಣದಿಂದ ಬೇಡಿಕೆ ಹೆಚ್ಚಾಗಿದೆ.



## ಅಕ್ಕಡಿ ಸಾಲಿನಲ್ಲಿ ತೊಗರಿ ಕರ್ನಾಟಕದ ಪರ್ಯಾಯ ಬೆಳೆ

**ಮೆಕ್ಕೆಜೋಳ, ಈರುಳ್ಳಿ ಬಿಳಿಜೋಳ ಬೆಳೆಯಲ್ಲಿ ಅಕ್ಕಡಿ ಸಾಲಿನಲ್ಲಿ ತೊಗರಿ ಬೆಳೆಯಲಾಗುತ್ತಿದೆ. ಈ ಸಲ ಬಿತ್ತಿದ್ದ ತೊಗರಿ ಬೆಳೆ ಈಗ ಇಬ್ಬನಿಗೆ ಚಿಗುರು ಬೀಳುತ್ತಿದೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಚೆನ್ನಗಿರಿ, ಹರಿಹರ ಭಾಗದಲ್ಲಿ ಅಂದಾಜು 6 ಸಾವಿರ ಹೆಕ್ಟೇರ್‌ನಲ್ಲಿ ಪರ್ಯಾಯ ಬೆಳೆಯಾಗಿ ಅಕ್ಕಡಿ ಸಾಲಿನಲ್ಲಿ ತೊಗರಿ ಬೆಳೆ ಇದ್ದು, ಇದು ರೈತನ ಕೈಸೇರಲು ಒಂದೆರೆಡು ತಿಂಗಳು ಕಾಯಬೇಕು ಎನ್ನಲಾಗುತ್ತಿದೆ.**

**ತೊಗರಿ ಬೆಳೆಗಾರರಿಗೆ ಒಂದಿಲ್ಲದೊಂದು ಸಂಕಷ್ಟ ಕಾಡುತ್ತಿದೆ. ಕಳೆದ ವರ್ಷದ ನೆಟೆರೋಗದಿಂದ ಬೆಳೆ ಹಾನಿಯಾಗಿತ್ತು. ಇದೀಗ ಬರದಿಂದ ಮತ್ತೊಮ್ಮೆ ತೊಗರಿ ಸೇರಿ ಹಲವು ಬೆಳೆ ನಾಶವಾಗಿದೆ.**

**-ರಾಧಾಕೃಷ್ಣ, ರೈತ**

**ಈ ವರ್ಷ ಮಳೆ ಜಾಸ್ತಿಯಾಗಿದ್ದರಿಂದ ಇಳುವರಿ ಕಡಿಮೆ ನಿರೀಕ್ಷೆಯಿಂದ ತೊಗರಿಬೇಳೆ ಸಗಟು ಕೆ.ಜಿ.ಗೆ 6-7 ರು. ರಷ್ಟು ಚಿಲ್ಲರೆ ದರ ಕೆಜಿಗೆ 8-10 ರು. ಏರಿಕೆಯಾಗಿದೆ. ಮುಂದಿನ ತಿಂಗಳು ಹೊಸ ತೊಗರಿಬೇಳೆ ಬರಲಿದ್ದು, ದರ ಯಥಾಸ್ಥಿತಿ ಇರಲಿದೆ.**

**-ಎನ್.ಶಿವಕುಮಾರ್, ಎಪಿಎಂಸಿ ಇಂಡಿಯನ್ ಫುಡ್ ಮಾಲೀಕ, ಬೆಂಗಳೂರು.**

Viswavani Pg 10

ಬೆಂಗಳೂರು **ಉದಯವಾಣಿ**

ಗುರುವಾರ, ನವೆಂಬರ್ 20, 2025

**ಜಿಕೆವಿಕೆ:** ಕೃಷಿಯಲ್ಲಿ ಕೀಟಗಳ ಸವಾಲು ಮತ್ತು ಸುಸ್ಥಿರ ನಿರ್ವಹಣೆ ಕುರಿತು ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ: ಅತಿಥಿಗಳು: ಜಿಕೆವಿಕೆ ಕುಲಪತಿ ಡಾ,. ಎಸ್.ವಿ.ಸುರೇಶ್, ವಿಜ್ಞಾನಿಗಳಾದ ನರೇಶ್ ಬಾಬು, ಎನ್.ಕೆ.ಕೃಷ್ಣಕುಮಾರ್, ಪೂನಂ ಜಸ್ರೋಟಿಯಾ. ಸ್ಥಳ: ಜಿಕೆವಿಕೆ ಸಭಾಂಗಣ, ಬೆಳಗ್ಗೆ 10 ಕ್ಕೆ.

V-karnataka pg 09

# ಮೃಗಾಲಯದ ಗೊಬ್ಬರಕ್ಕೆ ಡಿಮ್ಯಾಂಡ್!

## ಪ್ರಾಣಿಗಳ ಲದ್ದಿಯಿಂದ ಎರೆಹುಳು ಗೊಬ್ಬರ | ಪ್ರತಿ ಕೆ.ಜಿಗೆ 15 ರೂ.

**ನಾಗರಾಜ್ ನವೀಮನೆ** ಮೈಸೂರು
nagaraj.navimane@timesofindia.com

ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರಾಣಿಗಳಿಂದ ಸಂಗ್ರಹವಾಗುವ ಲದ್ದಿಯಿಂದ 'ಎರೆಹುಳು' ಗೊಬ್ಬರ ತಯಾರಿಸಲಾಗುತ್ತಿದ್ದು, ಕಡಿಮೆ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ. ಇದು ಮೃಗಾಲಯದ ಆದಾಯವೃದ್ಧಿಗೂ ಸಹಕಾರಿಯಾಗಿದೆ!

ಸುಮಾರು 80 ಎಕರೆ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ ಚಾಮರಾಜೇಂದ್ರ ಮೃಗಾಲಯ 143ಕ್ಕೂ ಹೆಚ್ಚು ಬಗೆಯ ಪ್ರಾಣಿಗಳಿಗೆ ಆಶ್ರಯ ನೀಡಿದೆ. ಇಂತಹ ಝೂನಲ್ಲಿ ತ್ಯಾಜ್ಯ ಎಂದು ಪರಿಗಣಿಸುವ ಮರಗಳಿಂದ ಉದುರುವ ಎಲೆಗಳು, ಪ್ರಾಣಿಗಳ ಲದ್ದಿ, ಅವು ತಿಂದುಬಿಟ್ಟ ಮೇವು, ಸೊಪ್ಪನ್ನು ಬಳಸಿಕೊಂಡು 'ಎರೆಹುಳು' ಗೊಬ್ಬರ ತಯಾರಿಸಲಾಗುತ್ತಿದೆ.

ಪ್ರಾಣಿಗಳಿಂದ ನಿತ್ಯ 2ರಿಂದ 3 ಟನ್ ಲದ್ದಿ ಸಂಗ್ರಹವಾಗುತ್ತಿದೆ. ಇದನ್ನು ಬಳಸಿ ತಿಂಗಳಿಗೆ 15 ಟನ್ 'ಎರೆಹುಳು' ಗೊಬ್ಬರ ಉತ್ಪಾದನೆ ಮಾಡಲಾಗುತ್ತಿದೆ. ಇದಕ್ಕಾಗಿ ಮೃಗಾಲಯದಲ್ಲಿ ಗೊಬ್ಬರ ತಯಾರಿಕಾ ಘಟಕ ಇದೆ. ಪ್ರತಿ ಕೆ.ಜಿ. ಗೊಬ್ಬರವನ್ನು 15 ರೂ.ಗೆ ನೀಡಲಾಗುತ್ತಿದ್ದು, ಇದು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆ. ಹೀಗಾಗಿ ವಿವಿಧ ಜಿಲ್ಲೆಗಳ ರೈತರಿಂದ ಬೇಡಿಕೆಯೂ ಹೆಚ್ಚಾಗಿದೆ.

**ಗೊಬ್ಬರ ತಯಾರಿಕೆ ಹೇಗೆ?:** ''ಆನೆ, ಘೇಂಡಾಮೃಗ, ನೀರಾನೆ, ಜಿಂಕೆ, ಜಿರಾಫೆ, ಕಾಡೆಮ್ಮೆ ಇತರ ಪ್ರಾಣಿಗಳ ಲದ್ದಿಯನ್ನು ಸಂಗ್ರಹಿಸಲಾಗುತ್ತದೆ. ಅದಕ್ಕೆ ಮರಗಳಿಂದ ಬಿದ್ದಿದ್ದ ಎಲೆ, ಪ್ರಾಣಿಗಳು ತಿಂದುಬಿಟ್ಟ ಮೇವುಗಳನ್ನು ಮಿಶ್ರಣ ಮಾಡಲಾಗುತ್ತದೆ. ಬಳಿಕ ಹಾಸಿಗೆಯಂತೆ ಪ್ರತಿ ಗುಡ್ಡೆಯನ್ನು ರಚಿಸಿ ಅದನ್ನು ನೀರಿನಲ್ಲಿ ಕಟ್ಟಲಾಗುತ್ತದೆ. ರಟ್ಟಿನ ಪೀಸು ಹಾಗೂ ಕಾಗದಗಳಿಂದ ಮುಚ್ಚಲಾಗುತ್ತದೆ. ಅದರೊಳಗೆ ಎರೆಹುಳವನ್ನು ಬಿಡಲಾಗುತ್ತದೆ. 40 ದಿನ ಹಾಗೆ ಬಿಟ್ಟು, ನಿತ್ಯ ನೀರು ಹಾಕಬೇಕು. ಒಣಗಿದ ನಂತರ ಕಸ ಹಾಗೂ ಕಡ್ಡಿಯನ್ನು ಯಂತ್ರದಿಂದ ಸೋಸಿ ಗೊಬ್ಬರದ ಮೂಟೆ ಮಾಡಲಾಗುತ್ತದೆ. ಒಣಗಿಸಿದ ನಂತರ ಒಂದು ಗುಡ್ಡೆಯಿಂದ 5 ಟನ್ ಗೊಬ್ಬರ ಸಿಗುತ್ತದೆ,'' ಎನ್ನುತ್ತಾರೆ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ.

''ಗೊಬ್ಬರ ತಯಾರಿಕೆ ಘಟಕವನ್ನು ಸಿಬ್ಬಂದಿ ಸಿದ್ದರಾಜು, ಭರತ್ ಮತ್ತು ಶ್ರೀನಿವಾಸ್ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಾಣಿ ತ್ಯಾಜ್ಯವನ್ನು ಆದಾಯವಾಗಿ ಬದಲಿಸುವ ಈ ಕಾರ್ಯವು ಮೃಗಾಲಯದಲ್ಲಿ ದಶಕಗಳಿಂದಲೂ ನಡೆಯುತ್ತಿದೆ. ಆದರೆ, ಬಹಳಷ್ಟು ಜನರಿಗೆ ಈ ಬಗ್ಗೆ ಗೊತ್ತಿಲ್ಲ, ರಾಸಾಯನಿಕ ಮುಕ್ತವಾದ ಈ ಸಾವಯವ ಗೊಬ್ಬರವನ್ನು ಕೃಷಿಭೂಮಿಗೆ ಬಳಸಿ ಹೆಚ್ಚು ಇಳುವರಿ ಪಡೆಯಬಹುದು. ಎರೆಹುಳಗಳನ್ನು ಹೆಗ್ಗಣಗಳಿಂದ ರಕ್ಷಿಸಲು ಬಲೆಗಳನ್ನು ಘಟಕದ ಸುತ್ತಲೂ ಹಾಕಲಾಗಿದೆ. ಇಲಿ ಬೋನುಗಳನ್ನು ಇರಿಸಲಾಗಿದೆ,'' ಎನ್ನುತ್ತಾರೆ ಮೃಗಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ನಿಶ್ಚಲ್ ಗೌಡ.



ಪ್ರಾಣಿಗಳ ಲದ್ದಿಯಿಂದ ಸಿದ್ಧಗೊಂಡ ಗೊಬ್ಬರ ಗುಡ್ಡೆ.



**'ಎರೆಹುಳು' ಗೊಬ್ಬರ ಮಾರಾಟ ಮೃಗಾಲಯದ ಆದಾಯದ ಮೂಲಗಳಲ್ಲಿ ಒಂದಾಗಿದೆ. 2024-25ನೇ ಸಾಲಿನಲ್ಲಿ 100 ಟನ್ ಗೊಬ್ಬರ ಮಾರಾಟ ಮಾಡಲಾಗಿದ್ದು, 15 ಲಕ್ಷ ರೂ. ಆದಾಯ ದೊರೆತಿದೆ. ಈ ವರ್ಷ ಮಾರ್ಚ್‌ನಿಂದ ಇಲ್ಲಿಯವರೆಗೂ 8 ಲಕ್ಷ ರೂ. ಆದಾಯ ಬಂದಿದೆ.**

**-ಪಿ.ಅನುಷಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಚಾಮರಾಜೇಂದ್ರ ಮೃಗಾಲಯ

# ಭಾರತೀಯ ಪರಂಪರೆಯಲ್ಲಿ ಪತ್ರಗಳ ಪಾತ್ರ



ತಿಳಿಬೆಳಕು
ಡಾ. ವಿ.ಬಿ. ಆರತೀ

ನಿಸರ್ಗಪ್ರಿಯರಾದ ಭಾರತೀಯರು ತಮ್ಮ ಜೀವನಶೈಲಿಯಲ್ಲಿ ಹೂವು-ಎಲೆ-ಚಿಗುರು-ಬೇರುಗಳನ್ನು ಪ್ರೇಮದಿಂದ ಮೌಲ್ಯವರಿತು ಬಳಸುತ್ತ ಬಂದಿದ್ದಾರೆ. ಅದರಲ್ಲೂ ಪತ್ರಗಳನ್ನು ಜೀವನದಲ್ಲಿ ಇಷ್ಟು ವ್ಯಾಪಕವಾಗಿ ವೈವಿಧ್ಯಮಯವಾಗಿ ಬಳಸಲಾಗಿವೆ. ಅಡುಗೆಯಲ್ಲಿ, ಪೂಜಾದಿ ಧಾರ್ಮಿಕ ಕಲಾಪಗಳಲ್ಲಿ, ಭೂಷಣಗಳಲ್ಲಿ, ಗೃಹಾಲಂಕಾರಗಳಲ್ಲಿ, ಔಷಧಿಗಳ ತಯಾರಿಕೆಯಲ್ಲಿ, ಶಿಷ್ಟಾಚಾರಗಳಲ್ಲಿ... ಪತ್ರಗಳನ್ನು ಬಳಸುವ ಪದ್ಧತಿ ಭಾರತೀಯರಲ್ಲಿ ಅನಾದಿಯಿಂದಲೂ ಬೆಳೆದುಬಂದಿದೆ.

ಧಾರ್ಮಿಕವಿಧಿಗಳಲ್ಲಿ ಪತ್ರಗಳಿಗೆ ಪ್ರಮುಖ ಸ್ಥಾನ. ಕಲಶ ಜೋಡಣೆಯಲ್ಲಿ ಮಾವಿನೆಲೆಗಳಿರುತ್ತವೆ. ಮಾವಿನೆಲೆ ಇಲ್ಲದಿದ್ದರೆ ವೀಳ್ಯದೆಲೆಗಳಿರುತ್ತವೆ. ಕಲಶವನ್ನು ಬಾಳೆಲೆಯ ಹಾಸಿನ ಮೇಲಿಡಲಾಗುತ್ತದೆ. ಕೆಲವು ಕಲಶಗಳಲ್ಲಿ ಅಡಕೆ-ತಳಿರುಗಳನ್ನೂ ಜೋಡಿಸುವುದುಂಟು. ಪೂಜಾಮಂಟಪಕ್ಕೂ ದೇವರಮನೆ ಬಾಗಿಲಿಗೂ ಮುಂಬಾಗಿಲಿಗೂ ಬಾಳೆಲೆ ಸಮೇತವಾದ ಕಂಬಗಳನ್ನೂ ಮಾವಿನೆಲೆಯ ತೋರಣಗಳನ್ನೂ ಕಟ್ಟಲಾಗುತ್ತದೆ. ಶುಭಕಾರ್ಯಗಳಲ್ಲಿ ತೆಂಗುಗರಿಗಳ ಚಪ್ಪರವನ್ನು ಕಟ್ಟಿ, ಅದಕ್ಕೆ ಬಾಳೆಕಂಬ- ಮಾವಿನೆಲೆ-ತೋರಣಗಳನ್ನೂ ಅಡಕೆಪಟ್ಟೆಗಳ ಅಲಂಕಾರ ವಿನ್ಯಾಸಗಳನ್ನೂ ಯೋಜಿಸಲಾಗುತ್ತದೆ. ಪೂಜೆಯಲ್ಲಿ ಪತ್ರಪೂಜೆಯ ಅಂಗವೇ ಇದೆ. ದೇವರಿಗೆ ಮಾಚೀ ಪತ್ರ, ಬಿಲ್ವಪತ್ರ, ತುಳಸೀ, ದವನ, ಮರುಗ, ಶಮೀ(ಬನ್ನಿ), ಭೃಂಗರಾಜ, ಬದರೀ, ದೂರ್ವಾ(ಗರಿಕೆ), ದತ್ತೂರ, ಸೇವಂತಿಗೆಕಾಪತ್ರ, ಬಿಲ್ವ ಸಿಂಧೂರಪತ್ರ, ತೇಜಪತ್ರ, ಕನ್ನೇರಪತ್ರಂ, ಪುನ್ನಾಗ, ನಾಸಕಸ್ತೂರಿ, ಎಕ್ಕದೆಲೆ, ಅರ್ಜುನ ಪತ್ರ, ದೇವದಾರು ಪತ್ರ, ಮರುವ ಪತ್ರ, ಕೇತಕೀ ಪತ್ರ, ಮಲ್ಲಿಕಾಪತ್ರ, ಕಮಲಪತ್ರ ಮುಂತಾದ ಪ್ರಶಸ್ತ ಪತ್ರಗಳನ್ನು ಸಮರ್ಪಿಸಲಾಗುತ್ತದೆ. ಶಿವನಿಗೆ ಬಿಲ್ವವೂ, ವಿಷ್ಣುವಿಗೆ ತುಳಸಿಯೂ, ಗಣಪನಿಗೆ ಗರಿಕೆಯೂ, ಸೂರ್ಯನಿಗೆ ಎಕ್ಕವೂ, ದೇವಿಗೆ ದಾಸವಾಳದೆಲೆಯೂ ಪ್ರಿಯವಂತೆ. ದೇವರಿಗೆ ನೈವೇದ್ಯವನ್ನು ಅರ್ಪಿಸುವಾಗ ಅದರ ಮೇಲೆ ತುಳಸೀದಳಗಳನ್ನಿಡಲಾಗುತ್ತದೆ. ಫಲತಾಂಬೂಲದಲ್ಲಿ ವೀಳ್ಯವನ್ನಿಟ್ಟೇ ಸಮರ್ಪಿಸಲಾಗುವುದು. ಯುಗಾದಿಯಂದು 'ಶತಾಯುರ್ವಜ್ರದೇಹಾಯ' ಎಂದು ಪಠಿಸುತ್ತ ಬೇವನ್ನು ಬೆಲ್ಲದೊಡನೆ ಬೆರೆಸಿ ತಿನ್ನುತ್ತೇವೆ. ಬೇವುಬೆಲ್ಲಗಳ ಕಹಿಸಿಹಿಗಳನ್ನು ಜೀವನದ ಕಹಿಸಿಹಿಗಳ ಸಂಕೇತವೆಂದು ಭಾವಿಸುತ್ತೇವೆ. ಬೌದ್ಧರಿಗೆ ಬೋಧಿವೃಕ್ಷದ ಎಲೆಯು ಪ್ರಶಸ್ತವೆನಿಸಿದೆ.



ಶಾಸ್ತ್ರಗಳಲ್ಲಿ ಘನಸಿದ್ಧಾಂತಗಳಿಗೆ ಪತ್ರಗಳ ಉಪಮಾನಗಳನ್ನು ಕೊಡುವುದುಂಟು. 'ವಟಪತ್ರಶಾಯಿ'ಯ ರೂಪ ಸಂಕೇತಪೂರ್ಣ. ಆಲದೆಲೆಯು ಸೃಷ್ಟಿಚಕ್ರದ ಅವಿನಾಶೀ ಸ್ವರೂಪವನ್ನು ಸೂಚಿಸುತ್ತದೆ. ಹಳೆಯ ಕಾಂಡವು ಒಣಗಿದರೂ ಬಿದ್ದರೂ ಒಂದಾಗುತಲೇ ಮತ್ತೊಂದೆಂಬಂತೆ ಬಿಳಲುಗಳನ್ನು ಬೇರುತ್ತಲೇ ಇರುವುದರಿಂದ ಅದಕ್ಕೆ ಅಳಿವೇ ಇಲ್ಲ! ಇದರ ಮಧ್ಯದಲ್ಲಿ ಲೀಲಾವಿನೋದನಾಗಿರುವ ಪರತತ್ವವನ್ನು ಕಾಲ್ಬೆಟ್ಟು ಚೀಪುತ್ತ ಮಲಗಿರುವ ದಿವ್ಯಶಿಶುವು ಸಂಕೇತಿಸುತ್ತಾನೆ. ಬ್ರಹ್ಮಾಂಡಕ್ಕೆ ಭಗವದ್ಗೀತೆಯು ನೀಡುವ ಊರ್ಧ್ವಮೂಲಮಧಃಶಾಖಾ (ತಲೆಬುಡವಾಗಿ ಅರಳಿರುವ ಅಶ್ವತ್ಥಮರ)ದ ಉಪಮಾನವು ಪ್ರಖ್ಯಾತ. ಅದರ ಎಲೆಗಳನ್ನು 'ವೇದಗಳು' ಎನ್ನಲಾಗಿದೆ. ಹಳೆಯವು ಉದುರಿದರೂ ಹೊಸಪತ್ರಗಳು ಹುಟ್ಟುತ್ತಲೇ ಇರುವುದರಿಂದ ವೇದಕ್ಕೆ ಅಳಿವಿಲ್ಲವೆಂಬುದು ಧ್ವನಿ. ಲೋಕವ್ಯವಹಾರದಲ್ಲಿದ್ದರೂ ಮೋಹವನ್ನು ಅಂಟಿಸಿಕೊಳ್ಳದೇ ಶುದ್ಧನಾಗಿ ಬದುಕು ಎಂಬ ಉಪದೇಶವನ್ನೀಯುವಾಗ ಕೃಷ್ಣನು ಬಳಸುವ ಉಪಮಾನವು 'ಪದ್ಮಪತ್ರಮಿವಾಂಭಸಾ'. ಅದರರ್ಥ, ತಾವರೆ ಎಲೆಯು ನೀರಲ್ಲಿದ್ದಂತೆ ಇರು ಎಂದು!

ಸ್ವಾರ್ಥದ ಭರದಲ್ಲಿ ಸತ್ಯಭಾಮೆಯು ಕೃಷ್ಣನನ್ನು ದಾನವಿತ್ತು, ಸಂಪತ್ತಿನಿಂದ ಕೊಳ್ಳುವ ಉದ್ಧಟತನಕ್ಕೆ ಮುಂದಾದಾಗ, ಸೋತಾಗ, ರುಕ್ಮಿಣಿಯು ತುಳಸೀದಳವೊಂದನ್ನು ತಕ್ಕಡಿಯಲ್ಲಿಟ್ಟಾಗ ಕೃಷ್ಣನ ಭಾರಕ್ಕೆ ಅದು ಸರಿದೂಗಿತಂತೆ. ಇದರ ಮೂಲಕ ತುಳಸೀದಳದ ಪಾರಮ್ಯವನ್ನು ಸಾರಲಾಗಿದೆ. "ಒಂದು ದಳ ಶ್ರೀತುಳಸಿ ಬಿಂದುಗಂಗೋದಕವ ಇಂದಿರಾ ರಮಣಗೆ ಅರ್ಪಿತವೆನುತ ಒಂದೆ ಮನಸಿನಲಿ ಸಿಂಧುಶಯನ ಎನೆ ಎಂದೆಂದು ವಸಿಪನಾ ಮಂದಿರದೊಳಗೆ," ಎಂದು ಹಾಡುತ್ತಾರೆ ಪುರಂದರದಾಸರು. ತುಳಸಿಯು ಲಕ್ಷ್ಮಿಸ್ವರೂಪವೆನಿಸಿದೆ. ತುಳಸಿಗೆ ತೊಟ್ಟು ನೀರು ಹಾಕಿ, ಸುತ್ತಿಬಂದು ಒಂದೆಲೆಯನ್ನು ಸ್ವೀಕರಿಸುವುದು ನಿತ್ಯವಿಧಿ. ಮಗಳ ಮದುವೆ ಮಾಡುವ ಮುನ್ನ ತುಳಸಿವಿವಾಹ ವಿಧಿಯನ್ನು ಮಾಡುವ ಸಂಪ್ರದಾಯವು ಮಹಾರಾಷ್ಟ್ರಾದಿ ಪ್ರಾಂತ್ಯಗಳಲ್ಲಿದೆ.

ಹೂ-ಎಲೆಗಳನ್ನು ಬಳಸಿ ಹಾರ-ತೋರಣಾದಿಗಳನ್ನೂ ಚಪ್ಪರಗಳನ್ನೂ ಕಟ್ಟುವುದು ದೊಡ್ಡ ಉದ್ಯಮಗಳಾಗಿವೆ. ಸಾವಿರಾರು ಪ್ರಕಾರಗಳ 'ಮಾಲಾಗ್ರಥನ'ಕಲಾಶೈಲಿಗಳನ್ನೂ ಅರಳಿಸಿವೆ. ಹೂವಿನೊಡನೆ ಮಾಚಿ ತುಳಸಿ ಮತ್ತಿತರ ಪತ್ರಗಳನ್ನೂ ಹಣ್ಣು ತೊಗಟೆ ಬೀಜ ಅಡಕೆಪಟ್ಟೆ ವಿಸ್ತರದೆಲೆ ವೀಳ್ಯದೆಲೆ ಮುಂತಾದುವನ್ನು ಸಂದರ್ಭೋಚಿತವಾಗಿ ಜೋಡಿಸುವ ವೈವಿಧ್ಯವೂ ಕಾಣಬರುತ್ತದೆ. ಈ ಕ್ಷೇತ್ರದಲ್ಲಿನ ಸೃಜನಶೀಲತೆಯು ಭಾರತದಲ್ಲಿ ಊಹಾತೀತವಾಗಿ ಬೆಳೆದು ಮುದವನ್ನಿತ್ತಿದೆಯೆನ್ನಿ! ನರ್ತಕಿಯರ ಕೇಶಾಲಂಕಾರದಲ್ಲಿ ಹೂದಿಂಡುಗಳ ಜೊತೆಯಲ್ಲಿ ಎಲೆದಿಂಡುಗಳನ್ನೂ ಪೇರಿಸಿಕೊಳ್ಳುತ್ತಾರೆ. ಬಾಲ್ಯದಲ್ಲೂ ನಾವು ಹೂಮಾಲೆಯಲ್ಲಿ ಮಧ್ಯಮಧ್ಯೆ ತುಳಸಿ/ಮಾಚಿಪತ್ರಗಳನ್ನು ಚುಕ್ಕೆಚುಕ್ಕೆಯಂತೆ ಕೂಡಿಸಿ ಮುಡಿಗೇರಿಸಿಕೊಳ್ಳುತ್ತಿದ್ದೆವು. ಮೊಗ್ಗಿನ ಜಡೆಯು ಕೇಶಾಲಂಕಾರಕ್ಕೆ ಉತ್ತಮ ನಿದರ್ಶನ. ನಮ್ಮ ಬಾಲ್ಯದಲ್ಲಿ ರಜಾದಿನಗಳಲ್ಲಿ ನಮ್ಮ ಅಮ್ಮಂದಿರೋ ಹೂವಳರೋ ನಮ್ಮ ಪುಟ್ಟ ಜಡೆಗಳನ್ನು ಚವರಿಯಿಂದ ಉದ್ದವಾಗಿಸಿ ಅದಕ್ಕೆ ನಾನಾ ಹೂವುಪತ್ರಗಳ ಮೊಗ್ಗಿನ ಜಡೆಯನ್ನು ಹೆಣೆಯುತ್ತಿದ್ದಾಗ ನಮ್ಮ ಸಂಭ್ರಮ ಸಂತಸಗಳದೆಷ್ಟೋ!

ಅಡೆಗೆಯಲ್ಲಂತೂ ಪತ್ರಗಳ ಬಳಕೆ ವಿಪುಲ. ಕೊತ್ತಂಬರಿ- ಕರಿಬೇವುಗಳಿಲ್ಲದೆ ಅಡುಗೆಯೇ ಇಲ್ಲ! ಪಾಲಕ್, ದಂಟು, ಮೆಂತ್ಯೆ, ಪುದಿನಾ, ನುಗ್ಗೆ, ಬಸಳೆ, ಅರಿವೆ, ಅಗಸೆ, ಸಬ್ಬಸಿಗೆ ಮುಂತಾದ ಬಗೆಬಗೆಯ ಸೊಪ್ಪುಗಳನ್ನೂ ಮೂಲಂಗಿ, ನವಿಲುಕೋಲು ಬೀಟ್ ರೂಟ್‌ಗಳ ಎಲೆಗಳನ್ನೂ ಪಲ್ಯ-ಸಾರು-ತೊವ್ವೆಗಳಲ್ಲಿ ಬಳಸಲಾಗುತ್ತದೆ. ಅರಿವೆ, ಪುದಿನಾ, ಸಬ್ಬಸಿಗೆಗಳನ್ನು ಒಳಗೊಂಡಂತಹ ಆಂಬೊಡೆ ಮದ್ದೂರುವಡೆ ಬೋಂಡಾಗಳ ಸ್ವಾದವು ಸಗ್ಗಕ್ಕೆ ಸಮ! ಇನ್ನು ಒಣಗಿಸಿದ ಪಲಾವ್-ಎಲೆ, ಮೇತಿಗಳೂ, ಚಹಾಗೆ ಹಾಕುವಂತಹ ಬಗೆಬಗೆಯ ಟೀ-ಎಲೆಪುಡಿಗಳು, ವೀಳ್ಯ- ತುಳಸೀ-ಪುದಿನಾ- ಪುಡಿಗಳ ಬಳಕೆಯ ಹರ್ಬಲ್-ಟೀ ವಿಶ್ವವಿಖ್ಯಾತವಾಗುತ್ತಿದೆ. ಮಾವಿನಚಿಗುರುಗಳ ಪಚ್ಚಡಿ, ಆಂಧ್ರದ ಗೊಂಗೂರ ಪಚ್ಚಡಿ, ಪಾಲಕ್-ಸಾಗುಗಳು, ಸ್ಯಾಂಡ್ವಿಚ್‌ನಲ್ಲಿ ಪುದಿನ- ಲೆಟ್ಯೂಸ್- ಪಾಲಕ್-ಕೊತ್ತಂಬರಿಗಳ ಬಳಕೆ, ಕಲಸಿದನ್ನ ಅಥವಾ ಚಪಾತಿ-ಪರೋಟಾಗಳಲ್ಲಿ ಮೆಂತ್ಯದೆಲೆ-ಪಾಲಾಕ್ ಗಳ ಬಳಕೆಯು ಸುಪ್ರಸಿದ್ಧ. ಇನ್ನು ಕರಿಬೇವಿನ ಚಟ್ನೀಪುಡಿ, ಕೊತ್ತಂಬರಿಪುಡಿ, ಮೆಂತ್ಯೆಸೊಪ್ಪಿನಪುಡಿ, ಮುಂತಾದವು ಜನಪ್ರಿಯವೇ.

ಆಯುರ್ವೇದದಲ್ಲೂ ನಾಟಿ ಚಿಕಿತ್ಸೆ ಮನೆಮದ್ದುಗಳಲ್ಲೂ ಪತ್ರಗಳ ಪಾತ್ರ ಮಹತ್ವದ್ದು. ತುಳಸಿ, ಗರಿಕೆ, ಬೇವು ರಸಗಳ ಸೇವನೆಯು ಆರೋಗ್ಯವರ್ಧಕ. ದೇಹದ ಉಷ್ಣಾಂಶವನ್ನು ಕುಗ್ಗಿಸಲು ಕಮಲದೆಲೆ ಮುಂತಾದ ಜಲಸಸ್ಯಗಳ ಎಲೆಗಳ ಹಾಸಿನಲ್ಲಿ ಮಲಗಿಸುವ ಚಿಕಿತ್ಸೆಯಿತ್ತಂತೆ! ನಮ್ಮ ಕಾವ್ಯಸಾಹಿತ್ಯದಲ್ಲಿ ವಿರಹತಪ್ತ-ನಾಯಕಿಯರೂ ಹೀಗೆ ಮಾಡುವುದನ್ನು ನೋಡುತ್ತೇವೆ! ಬಾಳೆಲೆಯನ್ನು ಮೈತುಂಬ ಹೊದ್ದಿಸಿ ಬಿಸಿಲಲ್ಲಿ ಮಲಗಿಸುವ ಚಿಕಿತ್ಸೆಯಿದೆ. ಬಾಳೆಲೆ, ತುಳಸಿ, ಆಮ್ಲಾ, ಬೇವು ಶತಾವರೀ ಪತ್ರಗಳನ್ನು ಮೈಮೇಲೆ ಹಚ್ಚಲೂ ಹಾಗೂ ಸೇವಿಸುವ ಔಷಧಗಳಲ್ಲಿಯೂ ಬಳಸಲಾಗುತ್ತವೆ. ಹೊಕ್ಕಳ ಮೇಲೆ ಬಾಳೆಲೆಯನ್ನಿಟ್ಟು ಅದರ ಮೇಲೆ ದೀಪವನ್ನಿಟ್ಟು ಬಟ್ಟಲನ್ನು ಬೀರಲಿಸಿ ಉದರಚಿಕಿತ್ಸೆಯನ್ನು ಮಾಡುವುದಿದೆ. ಕೈಕಾಲುಗಳಿಗೆ ಮುಳ್ಳು ಚುಚ್ಚಿಕೊಂಡರೆ, ಆ ಭಾಗಕ್ಕೆ ಎಕ್ಕದೆಲೆಯ ರಸವನ್ನು ಹಾಕಿದರೆ ಆ ಮುಳ್ಳು ಮೇಲೆದ್ದು ಬರುತ್ತಿದ್ದುದನ್ನು ನೋಡಿದ್ದೇವೆ. ಮೊಳೆನೋವು ಮೂಗೇಟುಗಳ ನೋವನ್ನು ಶಮನ ಮಾಡಲು ಬಾಳೆಲೆಯಿಂದ ಅಂಗಮರ್ದನ (ಮಸಾಜ್) ಮಾಡುವುದುಂಟು. ಹೊಕ್ಕಳ ಮೇಲೆ ಬಾಳೆಲೆಯಲ್ಲಿ ಸುತ್ತಿ, ಮೈಗೆ ಬಿಸಿನೀರಿನ ಹವೆಯನ್ನು ಬಿಡುವ ಸ್ಟೀಮ್ ಥೆರಪಿಯೂ ಹಳೆಯ ಚಿಕಿತ್ಸೆ.

ರಥಸಪ್ತಮಿಯಂದು ಎಕ್ಕದೆಲೆಗಳನ್ನು ತಲೆಭುಜಗಳ ಮೇಲಿಟ್ಟು ನೀರೆರೆದುಕೊಳ್ಳುತ್ತೇವೆ. ಕಾಗದವು ಬರುವ ಮುನ್ನ ಸಹಸ್ರಮಾನಗಳ ಕಾಲ ನಮ್ಮಲ್ಲಿ ಭೂರ್ಜಪತ್ರ ತಳೆಪತ್ರಗಳನ್ನೇ ಸಂದೇಶಕ್ಕಾಗಿ ಬಳಸಲಾಗುತ್ತಿತ್ತು. ಇಂತಹ ಲಕ್ಷೋಪ ತಾಳಪತ್ರ- ಭೂರ್ಜಪತ್ರಗಳನ್ನು ಸಂಗ್ರಹಾಲಯಗಳಲ್ಲಿ ಕಾಣಬಹುದಾಗಿದೆ. ಕಾಳಿದಾಸನ ಶಕುಂತಲೆಯೂ ತಾವರೆ ಎಲೆಯ ಮೇಲೆ ತನ್ನ ಉಗುರುಗಳಿಂದ ದುಶ್ಯಂತನಿಗೆ ಪ್ರೇಮಪತ್ರವನ್ನು ಬರೆದುದರ ವರ್ಣನೆಯನ್ನು ಕಂಡಿದ್ದೇವೆ. ಅಡಕೆಪಟ್ಟೆಯಿಂದ ನೆಲಕ್ಕೆ ಗೋಮಯ ಹಚ್ಚುವುದು, ಸಗಣಿ ಸಾರಿಸುವುದು ಅಲ್ಲದೆ ತಟ್ಟೆ, ದೊನ್ನೆ, ಬಟ್ಟಲು, ಪೊಟ್ಟಣಗಳನ್ನೂ ಕಲಾಕೃತಿಗಳನ್ನೂ ತಯಾರಿಸುವ ಉದ್ಯಮವೇ ಬೆಳೆದಿದೆ. ವನ ಜನರು ತಮ್ಮ ಕೇಶಾಲಂಕಾರಕ್ಕೂ ವಸ್ತ್ರಗಳಿಗೂ ಬಗೆಬಗೆಯ ಎಲೆಗಳನ್ನೂ ಗರಿಗಳನ್ನೂ ಜೋಡಿಸಿಕೊಳ್ಳುವುದು ಪ್ರಾಚೀನ ಕಾಲದಿಂದ ನಡೆದುಬಂದಿದೆ.

ಮುನಿಜನರೂ ಅದರಲ್ಲಿಯೂ ಮುನಿಕನ್ನಿಕೆಯರು ಹೂವು- ಎಲೆಗಳ ಆಭರಣಗಳನ್ನೇ ತಯಾರಿಸಿ ಧರಿಸುತ್ತಿದ್ದುದರ ಉಲ್ಲೇಖಗಳಿವೆ. ಅತಿಥಿಗಳಿಗೆ ಸುಮಂಗಲಿಯರಿಗೆ ತಾಂಬೂಲ ಕಾಣಿಕೆಗಳನ್ನೀಯುವಾಗಲೂ ವೀಳ್ಯದೆಲೆ ಅಥವಾ ಬಾಳೆಲೆಯ ಮೇಲಿಟ್ಟು ಕೊಡಲಾಗುತ್ತದೆ. ಚಿನ್ನಾಭರಣಗಳಿಲ್ಲದಿರುವ ಬಡವರ ಹೆಣ್ಣುಮಕ್ಕಳು ಅಥವಾ ವ್ರತಧಾರಿಣಿಯರು ತಮ್ಮ ಕಿವಿಯೋಲೆಯ ತೂತು ಮುಚ್ಚಿಹೋಗದಿರಲೆಂದು ತಾಳೆ ಎಲೆಗಳ ನಾರನ್ನು ಸುರುಳಿ ಸುತ್ತಿ ತೂತಿನಲ್ಲಿಟ್ಟುಕೊಳ್ಳುತ್ತಿದ್ದರಂತೆ. ಅದನ್ನೇ ಬಿಚ್ಚೋಲೆ ಎನ್ನುತ್ತೇವೆ. ಗೌರಿಯು ತಪಸ್ಸಿನಲ್ಲಿರುವಾಗ 'ಬಿಚ್ಚೋಲೆ-ಗೌರಮ್ಮ'ಳಾಗಿರುತ್ತಾಳಂತೆ! ಅಂತೂ ಭಾರತೀಯ ಜೀವನಶೈಲಿಯಲ್ಲಿ ಅದರಲ್ಲೂ ಸನಾತನ ಸಂಸ್ಕೃತಿಯಲ್ಲಿ ಬಗೆಬಗೆಯ ಪತ್ರಗಳು ಅನ್ಯೋನ್ಯಭಾವದಿಂದ ಬೆರೆತುಹೋಗಿವೆ.

(ಲೇಖಕಿ: ಸಂಸ್ಕೃತಿ ಚಿಂತಕಿ)